ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 115-120
©*IIMRD*, Mysuru

IIMRD JOURNALS
www.iimrd.com

# ‘ಕೋಟೆ’ ಕವನ: ಶೋಷಿತರ ಧ್ವನಿ ಮತ್ತು ಇತಿಹಾಸದ ಮರು ವ್ಯಾಖ್ಯಾನ

**ಆಂಜನೇಯ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸುಗೂರು

**ಸಾರಾಂಶ: (Abstract)**

*ಜಂಬಣ್ಣ ಅಮರಚಿಂತ ಅವರ ‘ಕೋಟೆ’ ಕವಿತೆಯು ದಲಿತ–ಬಂಡಾಯ ಸಾಹಿತ್ಯದ ಸಬಾಲ್ಟರ್ನ್ (ತಳಸಮುದಾಯದ) ದೃಷ್ಟಿಕೋನದಿಂದ ಇತಿಹಾಸವನ್ನು ಮರುವ್ಯಾಖ್ಯಾನಿಸುತ್ತದೆ. ಇತಿಹಾಸಕಾರರು ರಾಜರ ವೈಭವ ಮತ್ತು ಭವ್ಯ ಕೋಟೆಗಳನ್ನು ‘ಸುವರ್ಣಯುಗ’ ಎಂದು ಕೊಂಡಾಡಿದರೂ, ಅದರ ನಿರ್ಮಾಣದ ಹಿಂದೆ ಹರಿದ ಶ್ರಮಿಕರು, ಶೋಷಿತರು, ದಲಿತರು ಹಾಗೂ ಮಹಿಳೆಯರ ಪರಿಶ್ರಮ, ರಕ್ತ ಮತ್ತು ಕಣ್ಣೀರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಆಳುವ ವರ್ಗದ ಸುವರ್ಣಯುಗವು ಶೋಷಿತರಿಗೆ ‘ಕರಾಳಯುಗ’ವಾಗಿತ್ತು ಎಂಬುದನ್ನು ಕವಿತೆ ಮುನ್ನೆಲೆಗೆ ತರುತ್ತದೆ. ಗತಕಾಲದ ಕಲ್ಲಿನ ಕೋಟೆಗಳಷ್ಟೇ ಅಲ್ಲದೆ, ವರ್ತಮಾನದಲ್ಲೂ ಮುಂದುವರಿದಿರುವ ಜಾತಿ, ಧರ್ಮ ಹಾಗೂ ಸಾಮಾಜಿಕ ಅಸಮಾನತೆಯ ’ಅದೃಶ್ಯ ಕೋಟೆಗಳನ್ನು’ ಕವಿ ತೀವ್ರವಾಗಿ ಪ್ರಶ್ನಿಸುತ್ತಾರೆ. ಅಧಿಕೃತ ಇತಿಹಾಸದ ಪೊಳ್ಳುತನವನ್ನು ಬಯಲುಗೊಳಿಸಿ, ಶೋಷಿತರ ಕಡೆಯಿಂದ ಚರಿತ್ರೆಯನ್ನು ಪುನರ್–ವಾಚನ ಮಾಡುವ ವೈಚಾರಿಕ ಜಾಗೃತಿ ಮೂಡಿಸುವುದೇ ಈ ಲೇಖನದ ಮುಖ್ಯ ಸಾರವಾಗಿದೆ.*

**ಮುಖ್ಯಪದಗಳು (Keywords):** *ಕೋಟೆ, ಸುವರ್ಣಯುಗ, ರಾಜಪ್ರಭುತ್ವ, ಅದೃಶ್ಯದ ಗೋಡೆ, ಜಾತೀಯತೆ, ತಳಸಮುದಾಯ*

## ಪೀಠಿಕೆ

ಸಾಮಾಜಿಕ ಅಸಮಾನತೆಯನ್ನು ಸದಾ ತನ್ನ ಒಡಲಲ್ಲಿ ಹೊತ್ತಿರುವ ಭಾರತದ ನೆಲದಲ್ಲಿ ನಿರಂತರವಾಗಿ ತಳಸಮುದಾಯಗಳು ಎಲ್ಲ ಅವಕಾಶಗಳಿಂದ ವಂಚಿತವಾಗಿ ಅಂಚಿಗೆ ತಳಲ್ಪಟ್ಟಿವೆ. ಇಲ್ಲಿನ ತಳಸಮುದಾಯಗಳು ಸಾಹಿತ್ಯ–ಸಂಸ್ಕೃತಿ, ಅಧಿಕಾರ–ಅಂತಸ್ತುಗಳಲ್ಲಿ ತಾರತಮ್ಯಕ್ಕೆ ಒಳಗಾಗಿ ಅವಮಾನ ಅಪಮಾನಗಳನ್ನು ಸದಾ ಎದುರಿಸುತ್ತ ದಿನದೂಡುತ್ತಿವೆ. ಇದು ಶತಶತಮಾನಗಳಿಂದ ನಡೆದು ಬಂದಿದೆ. ಈ ಅನ್ಯಾಯವನ್ನು ಅಧಿಕೃತವಾಗಿ ಇತಿಹಾಸ ಪುಟಗಳಲ್ಲೂ ದಾಖಲಿಸದೆ ಶೋಷಿತ ತಳಸಮುದಾಯವನ್ನು ದೂರವಿಟ್ಟಿದ್ದಾರೆ. ಅವರನ್ನು ಪ್ರಾಣಿಗಳಿಗಿಂತಲು ಕಡೆಯಾಗಿ ತಮ್ಮ ಸುಖಭೋಗಕ್ಕೆ ಬಳಸಿಕೊಂಡು ಹಾಸುಂಡು ಬೀಸಿ ಹೊಗೆದಿದ್ದಾರೆ. ಅವರ ದುಡಿಮೆ, ಶ್ರಮವನ್ನು ಎಲ್ಲಿಯು ದಾಖಲಾಗದಂತೆ ನೋಡಿಕೊಂಡಿರುವ ಆಳುವ ಮೇಲ್ವರ್ಗ ದಮನಿತರ ಧ್ವನಿಯನ್ನು ಹತ್ತಿಕ್ಕಿದೆ. ಇದನ್ನು ದಾಖಲಿಸಬೇಕಾದ ಪಂಡಿತ ವರ್ಗ, ಕವಿ ಪುಂಗವರು, ಇತಿಹಾಸಕರರು ಕೇವಲ ಆಸ್ಥಾನದ ಭಟ್ಟಂಗಿಯಾಗಿ ರಾಜರ

***Please cite this article as:*** ಆಂಜನೇಯ. (2026). ‘ಕೋಟೆ’ ಕವನ: ಶೋಷಿತರ ಧ್ವನಿ ಮತ್ತು ಇತಿಹಾಸದ ಮರು ವ್ಯಾಖ್ಯಾನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 115–120

ಇತಿಹಾಸವನ್ನು ದಾಖಲಿಸಿ, 'ಸುವರ್ಣಯುಗವೆಂದು, ಸುವರ್ಣಾಕ್ಷರಗಳಲ್ಲಿ ಬರೆದ ಇತಿಹಾಸ' ಎಂದು ವರ್ಣಿಸಿ ಸ್ವಾರ್ಥ ಮೆರೆದು, ಮತ್ತೊಂದು ತುದಿಯಲ್ಲಿರುವ ಶೋಷಿತರನ್ನು ನಿರ್ಲಕ್ಷಿಸಿರುವುದು ಎದ್ದುಕಾಣುತ್ತದೆ. ಆದರೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ನವೋದಯ, ನವ್ಯ ಮತ್ತು ಪ್ರಗತಿಶೀಲ ಸಾಹಿತ್ಯದಲ್ಲಿ ತಳಸಮುದಾಯದ ಧ್ವನಿಯಾಗುವ ಪ್ರಯತ್ನ ಅಲ್ಲಲ್ಲಿ ಕಾಣಿಸಿಕೊಂಡರು ದಲಿತ–ಬಂಡಾಯ ಸಾಹಿತ್ಯದಲ್ಲಿ ತಳಸಮುದಾಯದ ಅಶೋತ್ತರಗಳನ್ನು  ಗಟ್ಟಿಯಾಗಿ ಪ್ರತಪಾದಿಸಿ, ಇತಿಹಾಸದ ಪುಟಗಳಲ್ಲಿ ಕಡಗಣನೆಯಾದ ಶೋಷಿತರ, ಮಹಿಳೆಯರ, ರೈತರ, ಕೂಲಿ–ಕಾರ್ಮಿಕರ ಹಾಗೂ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ಅಂಚಿಗೆ ತಳಲ್ಪಟ್ಟವರ ಕಡೆಗೆ ನಿಂತು ಇತಿಹಾಸವನ್ನು ಮರು ವ್ಯಾಖ್ಯಾನಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಂತಹ ದಲಿತ– ಬಂಡಾಯ ಸಾಹಿತ್ಯದ ಗಟ್ಟಿಧ್ವನಿಯಾದ ಜಂಬಣ್ಣ ಅಮರಚಿಂತರು ಸಶಕ್ತವಾಗಿ ಇಟಾಲಿಯನ್ ಮಾರ್ಕ್ಸ್‌ವಾದಿ ಚಿಂತಕ ಆಂಟೋನಿಯೊ ಗ್ರಾಮ್ಸಿ ಬಳಸಿದ ಹಾಗೂ ಇತಿಹಾಸಕಾರ ರಣಜಿತ್ ಗುಹಾ ಅವರು ಪ್ರತಿಪಾದಿಸಿದ ಸಬಾಲ್ಟರ್ನ್ ಮಾದರಿಯಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ.  ಅವರ  'ಕೋಟೆ' ಕವನ ಇದಕ್ಕೆ ಉತ್ತಮ ನಿದರ್ಶನವಾಗಿದೆ.

'ಕೋಟೆ' ಕವನವು ದಲಿತ–ಬಂಡಾಯ ಸಾಹಿತ್ಯ ಚಳವಳಿಯ ಪ್ರಧಾನ ಆಶಯಗಳನ್ನು ಪ್ರತಿನಿಧಿಸುವದರೊಂದಿಗೆ ಇತಿಹಾಸವನ್ನು ಶೋಷಿತ ತಳಸಮುದಾಯಗಳ ದೃಷ್ಟಿಕೋನದಿಂದ ನೋಡುತ್ತಾ, ರಾಜಪ್ರಭುತ್ವದ ವೈಭವೀಕರಣವನ್ನು ಪ್ರಶ್ನಿಸುವುದರ ಜೊತೆಗೆ  ಆಧುನಿಕ ಕಾಲದಲ್ಲೂ ಮುಂದುವರಿದಿರುವ ಸಾಮಾಜಿಕ ಅಸಮಾನತೆಯನ್ನು ತಿಕ್ಷ್ಣ ವ್ಯಂಗದ ಧ್ವನಿಯಲ್ಲಿ ಹೇಳಯ್ಯಾ ಇತಿಹಾಸಕಾರನೇ, ಇದು ಗತ ಇತಿಹಾಸವೆನಲೆ? ಕೋಟೆ ನಿರ್ಮಾಣ ಮುಗಿಯುತೆನಲೆ? ಎಂದು ಪ್ರಶ್ನಿಸುವ ಮೂಲಕ ರಾಜಪ್ರಭುತ್ವದ ಶೋಷಣೆಯ ಕರಿನೆರಳು ಆಧುನಿಕ ಯುಗದಲ್ಲೂ ಜಾತಿ, ಧರ್ಮ, ವರ್ಗ–ವರ್ಣದ ಸ್ವರೂಪದಲ್ಲಿ ಮುಂದುವರಿದಿರುವುದನ್ನು ಎತ್ತಿತೋರಿಸುತ್ತಾರೆ.

ಇತಿಹಾಸದ ಪುಟಗಳಲ್ಲಿ ಅರಮನೆ, ಅಲ್ಲಿಯ ಪರಿವಾರ ಮತ್ತು ರಾಜಧಾನಿಗಳ ರಕ್ಷಣೆಗೆ ಭವ್ಯ ಕೋಟೆಗಳನ್ನು ಕಟ್ಟಿಸಿದ ರಾಜ ಮಹಾರಾಜರ ಹೆಸರುಗಳು ಮಾತ್ರ ಉಳಿಯುತ್ತವೆ. ಆದರೆ ನಿಜವಾದ ಕೋಟೆಯ ನಿರ್ಮಾತೃಗಳ ಹೆಸರು ಎಲ್ಲಿಯೂ ದಾಖಲಾಗಿಲ್ಲ. ತಮ್ಮ ರಟ್ಟೆಯ ಸತುವು ಸವೆಸಿ, ಬೆಟ್ಟಗಳನ್ನು ಕುಟ್ಟಿ ಕಲ್ಲು ಹೊತ್ತ ಶ್ರಮಿಕರು ನೆನಪಾಗುವುದೇ ಇಲ್ಲ. ಇದು ಇತಿಹಾಸದ  ಬಹುದೊಡ್ಡ ವ್ಯಂಗ್ಯವಾಗಿ ಕಾಣುತ್ತದೆ. ತಳಸಮುದಾಯದ ತ್ಯಾಗವನ್ನು ನಿರ್ಲಕ್ಷಿಸಿದ ಸಮಾಜವು ಕೂಡ ಮರುಕ ಪಡುವಂತೆ ಅವರ ದೈಹಿಕ ಪರಿಶ್ರಮವನ್ನು, ನಿಕೃಷ್ಟ ಬದುಕಿನ ರೀತಿಯನ್ನು ಅನಾವರಣಗೊಳಿಸುವರು.

***"ಬೆಟ್ಟಗಳ ಕುಟ್ಟಿ ಹೆಬ್ಬಂಡೆ ಕಟೆದು***
***ಆನೆಗಾತ್ರದ ಕಲ್ಲೆತ್ತಿ ಅಡ್ಡಾಗಿ ನಿಲ್ಲಿಸಿದರು***
***ರಟ್ಟೆಯ ಸತುವು ಸವೆಸಿ ಬಿರುಕನು ಮೆತ್ತಿ***
***ಕಂದಕಗಳ ತೋಡಿ; ಕಣ್ಣೀರು ತುಂಬಿದರು."*** [1]

ಎನ್ನುವಲ್ಲಿ ಕೋಟೆ ನಿರ್ಮಾಣದ ಹಿಂದಿರುವ ಸಾವಿರಾರು ಶ್ರಮಿಕ, ಶೋಷಿತ, ಶೂದ್ರ ವರ್ಗದ ಜನರ ಕಣ್ಣೀರು ಮತ್ತು ರಕ್ತವನ್ನು ತೆರೆದಿಡುತ್ತವೆ. ಸಾಮ್ರಾಜ್ಯಗಳ ವೈಭವಕ್ಕೆ, ರಾಜ ಮಹಾರಾಜ ಐಸರಾಮಿ

ಬದುಕಿಗೆ ತಳಸಮುದಾಯದ ದುಡಿಯುವ ಜನರ ರಕ್ತ ಮತ್ತು ಪರಿಶ್ರಮವೇ ತಡಿಗೋಡೆಯಾಗಿತ್ತು ಎಂಬುದನ್ನು ನೆನಪಿಸುತ್ತವೆ. ಕೋಟೆಯ ನಿರ್ಮಾಣ ಮತ್ತು ವೈಭವದ ಹಿಂದೆ ಶ್ರಮಿಕರ ದೈಹಿಕ ಶ್ರಮ, ಕಣ್ಣೀರು ಮತ್ತು ಸಾವು ಅಡಗಿದೆ ಎಂಬುದನ್ನು ಕವಿತೆಯ ಆರಂಭದಲ್ಲಿ ಅನಾವರಣಗೊಳಿಸುತ್ತದೆ. ಶೋಷಕ ವರ್ಗಕ್ಕೆ ಶ್ರಮಿಕರು ಕೇವಲ ಸನ್ನೆಗೋಲಾಗಿ ಮತ್ತು ದಾಳಗಳಾಗಿ, ಯುದ್ಧದ ಭೂಮಿಯಲ್ಲಿ ಹೆಣವಾದರು. ಇದು 'ಸುವರ್ಣಯುಗ'ದ ಮಿಥ್ಯೆವನ್ನು ಎತ್ತಿಹೇಳುತ್ತದೆ.

ಸಾಮಾನ್ಯವಾಗಿ ಇತಿಹಾಸಕಾರರು ಮತ್ತು ವಿದ್ವಾಂಸರು, ರಾಜರ ಅರಮನೆ, ವೈಭೋಗಯುತ ಜೀವನ, ಕಟ್ಟಿಸಿದ ಕೋಟೆ–ಕೊತ್ತಲಗಳು, ಸ್ಮಾರಕಗಳು ಮತ್ತು ಮಾಡಿದ ದಿಗ್ವಿಜಯಗಳನ್ನು ನೋಡಿ "ಸುವರ್ಣಯುಗ" ಎಂದು ಬರೆಯುತ್ತಾರೆ. ಆದರೆ ಕವಿ ಆ ಕಟ್ಟಲ್ಪಟ್ಟ ಅಧಿಕೃತ ಇತಿಹಾಸವನ್ನು ನಿರಾಕರಿಸುತ್ತಾ, ಶ್ರಮಿಕರು, ದಲಿತರು, ಅಂಚಿಗೆ ತಳ್ಳಲ್ಪಟ್ಟವರ ತುದಿಯಿಂದ ನೋಡುತ್ತಾನೆ. ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ರಾಜರ ಆಳ್ವಿಕೆ, ಸಾಮ್ರಾಜ್ಯದ ವಿಸ್ತರಣೆ ಮತ್ತು ಬೃಹತ್ ನಿರ್ಮಾಣಗಳನ್ನು 'ಸುವರ್ಣಯುಗ' ಎಂಬ ಕಲ್ಪನೆಯನ್ನು ಕವಿ ಸಂಪೂರ್ಣವಾಗಿ ಒಡೆದುಹಾಕುತ್ತಾನೆ. ತಳಹಂತದ ಜನರ ಜೀವನದ ಗುಣಮಟ್ಟವನ್ನು ಆಧಾರಿಸಿ ಸುವರ್ಣಯುಗವನ್ನು ಅಳೆಯಬೇಕಾಗಿದೆ ಎನ್ನುವ ಪರ್ಯಾಯ ಇತಿಹಾಸ ನಿರ್ಮಾಣದ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಾನೆ.

***"ಪಟ್ಟವೇರಿದೊಬ್ಬನಿಗಾಗಿ ಚಟ್ಟವೇರಿದವರೆಷ್ಟೋ***
***ತಳದ ಜನರ ತಳಮಳದ ದನಿಗೆ ಬಾಣ ಹೂಡಿದ***
***ಶಬ್ದವೇಧಿ ನರಹಂತಕರ ನಿರಂತರ ಸಂತೆ–ಸುವರ್ಣಯುಗವಂತೆ***
***ಸುವರ್ಣಾಕ್ಷರದಲ್ಲಿ ಬರೆದ ಇತಿಹಾಸವಂತೆ***
***ಇದೊಂದು ಕಂತೆ; ಸುಳ್ಳು ಬೊಂಕುಗಳ ತೇಪೆಹಾಕಿ ಹೊಲಿದಂಥ ಬೊಂತೆ***
***ಶತಮಾನಗಳ ಮಾನ ಕಳೆದ ಸವರ್ಣೀಯ ಅರಸರಿಗೆ ಸುವರ್ಣಯುಗ***
***ಕಪ್ಪು ಜನರಿಗೆ ಮಾತ್ರ ಕರಿಯುಗ"*** [2]

ರಾಜಪ್ರಭುತ್ವದಲ್ಲಿ ಒಬ್ಬ ರಾಜ ಅಧಿಕಾರ ಹಿಡಿಯಲು, ಸಿಂಹಾಸನ ಏರಲು ಮತ್ತು ಅದನ್ನು ಉಳಿಸಿಕೊಂಡು, ವೈಭೋಗದ ಜೀವನವನ್ನು ನಡೆಸಲು ಬಲಿಪಡೆದ ಬಡಜೀವಿಗಳು, ರಾವುತರು ಮತ್ತು ಸೇವಕರು ಮಾಡಿದ ತ್ಯಾಗಕ್ಕೆ ಕೊನೆಯಿಲ್ಲ, ಅದಕ್ಕೆ ಹೋಲಿಕೆಯೂ ಇಲ್ಲ. ಪಟ್ಟವೇರಿದೊಬ್ಬನಿಗಾಗಿ ಚಟ್ಟವೇರಿದವರೆಷ್ಟೋ ಎನ್ನುವುದರ ಮೂಲಕ ಇತಿಹಾಸದ ಕರಾಳ ಕಹಿ ಸತ್ಯವನ್ನು ಕವಿತೆಯು ಮಾರ್ಮಿಕವಾಗಿ ತೆರೆದಿಡುತ್ತದೆ.

ಪ್ರಭುತ್ವ ತನ್ನ ವೈಭೋಗ, ಅಹಂಕಾರ ಮತ್ತು ಲೈಂಗಿಕ ವಿಲಾಸಗಳನ್ನು ಕಾಯ್ದುಕೊಳ್ಳಲು ಅಂಚಿಗೆ ತಳ್ಳಲ್ಪಟ್ಟ ಜನರ ಸಣ್ಣ ಪ್ರತಿಭಟನೆ ಅಥವಾ ಧ್ವನಿಯನ್ನು ಅಡಗಿಸಲು, ಹೊಸಕಿ ಹಾಕಲು ಬಾಣ ಹೂಡಿದ, ಆಡಳಿತಗಾರರನ್ನು, ರಾಜ ಮಹಾರಾಜರನ್ನು ಕವಿ 'ನರಹಂತಕರು' ಎಂದು ಕರೆದು ತೀವ್ರ ಬಂಡಾಯದ ಧ್ವನಿಯನ್ನು ದಾಖಲಿಸುತ್ತದೆ. ಇಲ್ಲಿ ಬಂಡಾಯ ಪ್ರಜ್ಞೆಯು ಕೇವಲ ಶೋಷಿತ, ಶ್ರಮಿಕರ ಪರವಾಗಿ ಮಾತ್ರವಲ್ಲದೆ, ಆಳುವ ವರ್ಗದಿಂದ ಲೈಂಗಿಕ ಹಾಗೂ ಮಾನಸಿಕ ಶೋಷಣೆಗೆ ಒಳಗಾದ ಸ್ತ್ರೀಯರ ಮತ್ತು

ಯುದ್ಧದಲ್ಲಿ ಮರಣಹೊಂದಿದ ಸೈನಿಕರ ಪರವಾಗಿಯೂ ಧ್ವನಿ ಎತ್ತುತ್ತದೆ. ಇತಿಹಾಸದ ನಕಲಿ ಸುವರ್ಣ ಪುಟಗಳನ್ನು 'ಸುಳ್ಳು ಬೊಂಕುಗಳ ತೇಪೆಹಾಕಿ ಹೊಲಿದಂಥ ಬೊಂತೆ' ಎಂದು ತಿವಿಯುತ್ತದೆ. ಇತಿಹಾಸದುದ್ದಕ್ಕೂ ಕಪ್ಪು ಜನರಿಗೆ ಸುವರ್ಣಯುಗಗಳು ದಕ್ಕದೆ, ಅವು ಅಂಧಕಾರದ ಕರಿಯುಗವಾಗಿರುವುದನ್ನು ಬಯಲಿಗೆಳಿಯುತ್ತದೆ.

ಕೋಟೆ ಕವಿತೆಯ ಎರಡನೇ ಭಾಗವು ಗತಕಾಲದ ಕೋಟೆಯಿಂದ ವರ್ತಮಾನದ ಸಾಮಾಜಿಕ, ರಾಜಕೀಯ ಸ್ಥಿತಿಗೆ ನೇರ ಸಂಪರ್ಕ ಕಲ್ಪಿಸುತ್ತದೆ. ಕೋಟೆ ನಿರ್ಮಾಣ ಮುಗಿದಿಲ್ಲ, ಅದು ಬೇರೆ ಬೇರೆ ಸ್ವರೂಪ ಪಡೆದುಕೊಂಡಿದೆ ಎಂಬ ತೀವ್ರವಾದ ಆತಂಕವನ್ನು ಕವಿತೆ ವ್ಯಕ್ತಪಡಿಸುತ್ತದೆ. ಇಂದಿನ ಆಧುನಿಕ ಸಮಾಜದಲ್ಲಿ ಕಲ್ಲಿನ ಕೋಟೆಗಳು ನಿರ್ಮಾಣ ಮಾಡದಿರಬಹುದು, ಆದರೆ ಅದಕ್ಕಿಂತಲೂ ಅಪಾಯಕಾರಿಯಾದ ಜಾತಿ, ಧರ್ಮ, ಅಧಿಕಾರ ಮತ್ತು ಬಂಡವಾಳಶಾಹಿ ರೂಪದ ಕಣ್ಣಿಗೆ ಕಾಣದ ಅದೃಶ್ಯ ಕೋಟೆಗಳು ನಿರ್ಮಾಣವಾಗಿವೆ. ಅದನ್ನೆ

***"ಇಲ್ಲ ಇಲ್ಲ ಮುಗಿಯಲೇ ಇಲ್ಲ.***
***ಕಟ್ಟುತ್ತಿರುವವರು ಮತ್ತೆ ಯಾರೋ***
***ಹಾಳು ಬಿದ್ದ ಈ ಬುನಾದಿ ತೋಡಿ***
***ಎಬ್ಬಿಸುತ್ತಿರುವವರು ಮತ್ತೆ ಯಾರೋ***
***ಆಕಾಶದೆತ್ತರಕೆ ಗೋಡೆಗಳ***
***ತೋಡುತ್ತಿರುವವರು ಮತ್ತೆ ಯಾರೋ***
***ಪಾತಾಳದಾಳದ ಕಂದಕಗಳ"*** [3]

ಅಂದು ಶ್ರಮಿಕರು ಹೊಟ್ಟೆ ಹೊರೆಯುವುದಕ್ಕಾಗಿ, ಪ್ರಭುತ್ವದ ಕಟ್ಟಪ್ಪಣೆಯನ್ನು ಪಾಲಿಸುವುದಕ್ಕಾಗಿ ಕೋಟೆಗಳನ್ನು ನಿರ್ಮಾಣ ಮಾಡಿ, ಕಂದಕಗಳನ್ನು ತೋಡಿದರೆ ಇಂದು ಪ್ರಭುತ್ವದ ಪೋಷಕರಾದ ಜಾತಿವಾದಿ ಮತ್ತು ಮತೀಯವಾದಿಗಳು ತಮ್ಮ ಹಿತರಕ್ಷಣೆಗೆ ಕಟ್ಟುವ ಕ್ರಿಯೆಯನ್ನು ಆಧುನಿಕ ಯುಗದಲ್ಲಿ ನಿರಂತರವಾಗಿ ಮುಂದುವರಿಸಿದ್ದಾರೆ. ಅದು

***"ಯಾವ ಶತೃವಿನ ಭಯಕ್ಕೆ ಅಲ್ಲ***
***ಯಾವ ದಾಳಿಯ ಹೆದರಿಕೆ ಇಲ್ಲ***
***ಒಳಗಿದ್ದವರು ಹೊರ ಹೋಗದಂತೆ***
***ಸೂರ್ಯನ ಮುಖ ಕಾಣದಂತೆ"*** [4]

ಆಧುನಿಕ ಯುಗದ ಅದೃಶ್ಯದ ಕೋಟೆಗಳ ನಿರ್ಮಾಣದ ಹಿಂದಿನ ಉದ್ದೇಶ ಸಮಾಜದಲ್ಲಿ ಜಾತೀಯತೆ, ಅಸಹಿಷ್ಣುತೆ, ಅಸಮಾನತೆಯನ್ನು ಸೃಷ್ಟಿಸಿ, ಪೋಷಿಸುವುದಕ್ಕಾಗಿ, ಮನುಷ್ಯರೇ ಮನುಷ್ಯರಿಗಾಗಿ ನಿರ್ಮಿಸಿದ ಅದೃಶ್ಯ ಗೋಡೆಗಳು, ಆಧುನಿಕ ಗೋಡೆಗಳು ಶತ್ರುಗಳ ದಾಳಿಯಿಂದ ರಕ್ಷಿಸಲು ಕಟ್ಟಿದ್ದಲ್ಲ; ಬದಲಾಗಿ ಮನೆಯೊಳಗೆ, ಮನದೊಳಗೆ, ಮಾತು ಮತ್ತು ಕೃತಿಗಳಲ್ಲಿ ಮನುಷ್ಯನ ಸ್ವಾತಂತ್ರ್ಯವನ್ನು ಬಂದಿಸಲು ಕಟ್ಟಿದ್ದು. ಅಸಮಾನತೆ–ತಾರತಮ್ಯದ ಏಳು ಸುತ್ತಿನ ಕೋಟೆಗಳು ಭೇದಿಸಲು ಹೊರಟರೇ ಮೇಲ್ವರ್ಗದ

ಜಾತಿವಾದಿಗಳ ಕೆಂಗಣ್ಣಿಗೆ ಗುರಿಯಾಗಿ ಅಪಮಾನ–ಅವಮಾನಗಳನ್ನು ಎದುರಿಸಿ, ಕೊಲೆ–ಸುಲಿಗೆ, ಅಪಹರಣಕ್ಕೆ ಒಳಗಾಗಿ ಬದುಕನ್ನು ಮತ್ತಷ್ಟು ಕತ್ತಲಾಗಿಸಿಕೊಳ್ಳಬೇಕಾಗುತ್ತದೆ. ಅಂದರೆ ಬಲಿತವರ ದೌರ್ಜನ್ಯ–ದಬ್ಬಾಳಿಕೆ ಇಂದಿಗೂ ನಿರಾಂತಕವಾಗಿ ಮುಂದುವರಿದರುವುದು ಮನುಕುಲಕ್ಕೆ ಮಾರಕವಾಗಿದೆ. ಗತಕಾಲದ ನರಳಾಟಕ್ಕೂ ಇಂದಿನ ನರಳಾಟಕ್ಕೂ ವ್ಯತ್ಯಾಸವಿಲ್ಲ ಎಂಬುದನ್ನು ಕವಿ ಧ್ವನಿಸುತ್ತಾರೆ.

***"ಹೇಳಯ್ಯಾ ಇತಿಹಾಸಕಾರನೇ***
***ಇದು ಗತ ಇತಿಹಾಸವೆನಲೆ?***
***ಕೋಟೆ ನಿರ್ಮಾಣ ಮುಗಿಯುತೆನಲೆ?"*** [5]

ಭೌತಿಕ ಕೋಟೆಗಳ ನಿರ್ಮಾಣ ಕಾರ್ಯ ಇಂದು ನಡೆಯದೇ ಇದ್ದರೂ, ಇಂದಿಗೂ ಮುಂದುವರಿದಿರುವ ಮಾನವನ ಶೋಷಿಸುವ, ಕುಗ್ಗಿಸುವ ಸಮಾಜದ ಅಸ್ಪೃಶ್ಯತೆ, ಜಾತೀಯತೆ, ಸಾಮಾಜಿಕ ತಾರತಮ್ಯ ಎಂಬ ಅದೃಶ್ಯ ಗೋಡೆಗಳು ನಿರ್ಮಾಣವಾಗುತ್ತಿರುವುದನ್ನು ಕಂಡ ಕವಿಯೂ ಶ್ರಮಿಕ, ಶೋಷಿತರ ಇತಿಹಾಸವನ್ನು ನಿರ್ಲಕ್ಷಿಸಿದ ಇತಿಹಾಸಕಾರನನ್ನು ನೇರವಾಗಿ ನಿಲ್ಲಿಸಿ, ಅವರು ಮಾಡಿದ ಘೋರ ಅನ್ಯಾಯವನ್ನು ಪ್ರಶ್ನಿಸುತ್ತಾನೆ. ಇತಿಹಾಸವನ್ನು ಅಂಚಿಗೆ ತಳಲ್ಪಟ್ಟವರ ಕಡೆಯಿಂದ ನೋಡಿ, ಮುಖಾಮುಖಿಯಾಗಲು ಬಯಸುತ್ತಾನೆ.

**ಉಪಸಂಹಾರ**

ಪ್ರಸ್ತುತ ಕೋಟೆ ಕವಿತೆಯಲ್ಲಿನ ಬಂಡಾಯ ಪ್ರಜ್ಞೆಯು ಕೇವಲ ಗತಕಾಲದ ಆಕ್ರೋಶವಾಗಿರದೇ, ಚಾರಿತ್ರಿಕ ಸತ್ಯದ ಶೋಧನೆ ಮತ್ತು ಮಾನವ ಹಕ್ಕುಗಳ ಪ್ರತಿಪಾದನೆಯಾಗಿದೆ. ಅಷ್ಟೆ ಅಲ್ಲದೇ ವರ್ತಮಾನದ ಎಚ್ಚರಿಕೆಯೂ ಆಗಿದೆ. 'ಕೋಟೆ' ಎಂಬುದು ಇಲ್ಲಿ ಕೇವಲ ಕಲ್ಲಿನ ಕಟ್ಟಡವಲ್ಲ; ಅದು ಅಧಿಕಾರ, ಶೋಷಣೆ, ಜಾತಿವ್ಯವಸ್ಥೆ ಮತ್ತು ನಿರಂಕುಶ ಪ್ರಭುತ್ವದ ಸಂಕೇತ. ಅಂತಹ ಚರಿತ್ರೆಯ ಪ್ರಸಿದ್ಧ ಕಟ್ಟಡಗಳ ಅಡಿಯಲ್ಲಿ ಹೂತುಹೋದ ಶ್ರಮಿಕರ ಶ್ರಮವನ್ನು ಗುರುತಿಸುವುದು ಹಾಗೂ ರಾಜರ ಸುವರ್ಣ ಇತಿಹಾಸದ ವಿಜೃಂಭಣೆಯ ಮರೆಯಲ್ಲಿ ಮರೆತುಹೋದ ಶ್ರಮಿಕರ, ಮಹಿಳೆಯರ ಮತ್ತು ಕೆಳವರ್ಗದ ಜನರ ರಕ್ತದ ಇತಿಹಾಸವನ್ನು ಮುನ್ನೆಲೆಗೆ ತರುವ ಮೂಲಕ ಇಂದಿನ ಸಮಾಜದಲ್ಲೂ ಜೀವಂತವಾಗಿರುವ 'ಅದೃಶ್ಯ ಕೋಟೆಗಳನ್ನು' ನಾಶಮಾಡಲು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವುದು ಮತ್ತು ಇತಿಹಾಸವನ್ನು ಕಟ್ಟಬೇಕಾದ ನೆಲೆಯನ್ನು ಎತ್ತಿಹೇಳುವುದು ಈ ಕವಿತೆಯ ಮುಖ್ಯ ಆಶಯವಾಗಿದೆ. ಇತಿಹಾಸದ ಪೊಳ್ಳುತನವನ್ನು ಪ್ರಶ್ನಿಸುವ ಕವಿತೆ ಓದುಗನಲ್ಲಿಯೂ ವೈಚಾರಿಕ ಜಾಗೃತಿಯನ್ನು ಮೂಡಿಸುತ್ತದೆ. ಸಾಂಪ್ರದಾಯಿಕ ಇತಿಹಾಸಕಾರರು ಕಟ್ಟಿಕೊಡುವ 'ಸುವರ್ಣಯುಗ'ದ ಕಲ್ಪನೆಯನ್ನು ತೀವ್ರವಾಗಿ ನಿರಾಕರಿಸಿ, ಇತಿಹಾಸದ ಪಠ್ಯಗಳನ್ನು ಪುನರ್–ವಾಚನ ಮಾಡುವ ಹೊಸ ಮಾದರಿಗೆ ನಾಂದಿಯಾಗಿರುವುದರಿಂದ ಕವಿತೆ ಅತ್ಯಂತ ಪ್ರಸ್ತುತವಾಗಿದೆ.

**ಕೊನೆಟಿಪ್ಪಣೆಗಳು**

1. ಜಂಬಣ್ಣ ಅಮರಚಿಂತ. (1993). *ಅಮರಚಿಂತ ಕಾವ್ಯ (ಅದೋ ಜಗತ್ತಿನ ಕಾವ್ಯ).* ಪು.ಸಂ.19
2. ಅದೇ. ಪು.ಸಂ.20

3. ಅದೇ.
4. ಅದೇ.
5. ಅದೇ.

**ಪರಾಮರ್ಶನ ಗ್ರಂಥಗಳು**


- ಜಂಬಣ್ಣ ಅಮರಚಿಂತ. (1993). *ಅಮರಚಿಂತ ಕಾವ್ಯ (ಅದೋ ಜಗತ್ತಿನ ಕಾವ್ಯ).* ಪ್ರಗತಿಪರ ವಿಕಾಸ ವೇದಿಕೆ.
- ಮೇಟಿ ಮಲ್ಲಿಕಾರ್ಜುನ. (2017). *ತಾತ್ವಿಕತೆ (ಕರ್ನಾಟಕ ಸಬಾಲ್ಟನ್ ಓದು ಮಾಲಿಕೆ).* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಪ್ರಿಯದರ್ಶನಿ ಸಿದ್ದಣ್ಣ. (2017). *ಜಂಬಣ್ಣ ಅಮರಚಿಂತರ ಸೃಜನಶೀಲ ಕೃತಿಗಳು.* (ಸಂಶೋಧನಾ ಪ್ರಬಂಧ), ಗುಲ್ಬರ್ಗಾ ವಿಶ್ವವಿದ್ಯಾಲಯ.